ದಿನಾಂಕಃ **09-01-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಜಿ ವಕೀಲರಿಂದ,**

1) ನನ್ನ ತಂದೆಗೆ ನಾನು ಸೇರಿ ನಾಲ್ಕು ಜನ ಮಕ್ಕಳು. ಅವರುಗಳೆಂದರೆ ರಾಮೇಗೌಡ, ಸವಲೇಗೌಡ, ಸಿದ್ದೇಗೌಡ ಮತ್ತು ನಾನು ಜಯರಾಮೇಗೌಡ. ನಾನು ಮತ್ತು ನನ್ನ ಸಹೋದರ ರಾಮೇಗೌಡ ಹೊಸ ಅಗ್ರಹಾರ ಗ್ರಾಮದ ಸೊಸೈಟಿ ಹಿಂಭಾಗದಲ್ಲಿ ಇರುವ ಮನೆಯಲ್ಲಿ ಅರ್ಧ ಅರ್ಧ ಭಾಗದಲ್ಲಿ ಸ್ವಾಧೀನ ಇರುತ್ತೇವೆ. ದಾವಾ ಸ್ವತ್ತಿನ ಪಕ್ಕದಲ್ಲಿ ನಮ್ಮ ಮನೆ ಇರುತ್ತದೆ. ದಾವಾ ಸ್ವತ್ತಿನ ಪಕ್ಕದಲ್ಲಿ ಇರುವ ಮನೆಯನ್ನು ಪ್ರತಿವಾದಿ ಖರೀದಿ ಮಾಡಿರುತ್ತಾರೆ. ಪ್ರತಿವಾದಿ ಮತ್ತು ನಾವು ವಾಸ ಮಾಡುತ್ತಿರುವ ಮನೆ ನಡುವೆ 100 ಮೀಟರ್ ಅಂತರ ಇರುತ್ತದೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ಭಾವಚಿತ್ರ ತೋರಿಸಿ ಸದರಿ ಭಾವಚಿತ್ರದ ದ್ವಿಚಕ್ರ ವಾಹನ ಕಾಣುವ ಮನೆ ನಾನು ಮತ್ತು ರಾಮೇಗೌಡ ವಾಸ ಮಾಡುತ್ತಿದ್ದೇವೆ ಎಂದು ಸೂಚಿಸಿದಾಗ ಹೌದು ಎಂದು ಒಪ್ಪಿಕೊಂಡಿರುತ್ತಾರೆ, ಕಾರಣ ಸದರಿ ಭಾವಚಿತ್ರವನ್ನು ನಿಪಿ 13 ಎಂದು ಗುರುತಿಸಲಾಯಿತು. ನಾವು ವಾಸ ಮಾಡುತ್ತಿರುವ ಮನೆಯ ವಿಸ್ತೀರ್ಣ ಪೂರ್ವ – ಪಶ್ಚಿಮ 60 ಅಡಿ, ಉತ್ತರ – ದಕ್ಷಿಣ 50 ಅಡಿ ಇರುತ್ತದೆ.

2) ಹೆಚ್ ಕೆ ಸಿದ್ದೇಗೌಡ ಎಂಬುವವರು ವಾದಿ ವಿರುದ್ಧ ಅಸಲು ದಾವೆ 290/1990 ಸಲ್ಲಿಸಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯ ಬಗ್ಗೆ ಇದೂವರೆಗೂ ಗೊತ್ತಿರುವುದಿಲ್ಲ. ಸದರಿ ವಿಷಯವನ್ನು ನನ್ನ ತಕರಾರಿನಲ್ಲಿ ಹೇಳಿರುವುದಿಲ್ಲ. ನಾನು ಪಟಾಕಿ ಜಯರಾಮ್ ಗ್ರಾಮ ಪಂಚಾಯ್ತಿ ಅಧ್ಯಕ್ಷರವರ ಸಹೋದರಿಯನ್ನು ನಾನು ಮದುವೆ ಆಗಿರುತ್ತೇನೆ. ಪಟಾಕಿ ಜಯರಾಮ್ ರವರ ಪತ್ನಿ ಸಹ ಗ್ರಾಮದ ಪಂಚಾಯ್ತಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಅಸಲು ದಾವೆ 290/1990 ಮತ್ತು ಆರ್ ಎ 11/1994 ವಜಾ ಆದ ನಂತರ ನನ್ನ ಸಹೋದರನ ಹೆಸರು ಸಿದ್ದೇಗೌಡ ಆಗಿದ್ದು ಗ್ರಾಮ ಪಂಚಾಯ್ತಿ ಅಧ್ಯಕ್ಷರ ಜೊತೆ ಷಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

3) 1 ನೇ ವಾದಿಯ ಇಬ್ಬರು ಹೆಂಡತಿಯರು ತನ್ನ ಅಲ್ಪ ವಯಸ್ಸಿನ ಮಕ್ಕಳ ಪರವಾಗಿ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಮತ್ತು ನಾನು ದಾಖಲೆಗಳನ್ನು ನೋಡಿರುವುದಿಲ್ಲ. 1989 ರಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ ಮಂಡಲ್ ಪಂಚಾಯ್ತಿಯಲ್ಲಿ ವಾದಿ 2 ಮತ್ತು 3 ರವರ ಹೆಸರಿನಲ್ಲಿ ಖಾತೆ ನಮೂದಾಗಿತ್ತು ಎಂದರೆ ಸರಿಯಲ್ಲ. ಸದರಿಯವರ ಹೆಸರಿನಲ್ಲಿರುವ ಖಾತೆಯನ್ನು ಹೆಚ್ ಕೆ ಸಿದ್ದೇಗೌಡರವರು ಜಿಲ್ಲಾ ಪಂಚಾಯ್ತಿ ಮತ್ತು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ 2 ಮತ್ತು 3 ರವರ ಹೆಸರಿನಲ್ಲಿರುವ ಖಾತೆಯನ್ನು ಪ್ರಶ್ನೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ದಾವಾ ಸ್ವತ್ತಿನ ಖಾತೆ ನಮ್ಮ ಹೆಸರಿನಲ್ಲಿ ಇರುವುದರಿಂದ ಪ್ರಶ್ನೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

4) ನನ್ನ ತಂದೆ ಹೆಸರು ಸಣ್ಣಕರೀಗೌಡ. ನಿಡಿ 10 ದಾಖಲೆಯಲ್ಲಿ ಬೊಮ್ಮೇನಹಳ್ಳಿ ಗ್ರಾಮದ ಬೆಟ್ಟೇಗೌಡನ ಮಕ್ಕಳು ಕರೀಗೌಡ ಮತ್ತು ಸಿದ್ದೇಗೌಡ ಎಂದು ನಮೂದಿರುತ್ತದೆ ಎಂದರೆ ಸರಿ. ನಿಡಿ 10 ಕ್ರಯ ಪತ್ರ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ದಾಖಲೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 13 ದಾಖಲೆಯು ನಾವು ವಾಸ ಮಾಡುತ್ತಿರುವ ಮನೆಗೆ ಸಂಬಂಧಿಸಿದ ದಾಖಲೆ ಆಗಿರುತ್ತದೆ. ನಿಡಿ 1 ಕ್ರಯ ಪತ್ರದಲ್ಲಿ ಆಸ್ತಿ ನಂಬರ್ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಡಿ 1 ಕ್ರಯ ಪತ್ರದಲ್ಲಿ ಪೂರ್ವ ಪಶ್ಚಿಮ 60 ಅಡಿ, ಉತ್ತರ ದಕ್ಷಿಣ 50 ಅಡಿ ಎಂದು ಇದೆ ಎಂದರೆ ಅದು ನಾವು ವಾಸ ಮಾಡುತ್ತಿರುವ ಮನೆಯ ವಿಸ್ತೀರ್ಣ ಎಂದು ನುಡಿಯುತ್ತಾರೆ.

5) ವಾದಿಗಳು ನಿವೇಶನ ಸಂಖ್ಯೆ 46 ಮತ್ತು 47 ರಲ್ಲಿರುವ ಪೂರ್ವ ಪಶ್ಚಿಮ 120 ಅಡಿ, ಉತ್ತರ ದಕ್ಷಿಣ 50 ಅಡಿ ಆಸ್ತಿಗಳಿಗೆ ಸಂಬಂಧಿಸಿದಂತೆ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ವಾದಿಗಳು ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯರ ಸ್ವಾಧೀನ ಇರುವ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ

ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಂಚಾಯ್ತಿ ಅಧ್ಯಕ್ಷರ ಜೊತೆ ಷಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ವಾದಿಯ ಸ್ವಾಧೀನಕ್ಕೆ ತೊಂದರೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ